**ಸಮಗ್ರ ಶಿಕ್ಷಣ ಕರ್ನಾಟಕ**
**ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಟ್ಟಡಗಳ ಪೂರಕ ಕಟ್ಟಡ, ನೃಪತುಂಗ ರಸ್ತೆ,**
**ಬೆಂಗಳೂರು-560 001**

ಸಂಖ್ಯೆ: SSK/PLAN/58/2025-JDA/e-82478

ದಿನಾಂಕ: 24-04-2026

ರವರಿಗೆ,

ಉಪನಿರ್ದೇಶಕರು (ಆಡಳಿತ)
ಶಾಲಾ ಶಿಕ್ಷಣ ಇಲಾಖೆ,
----------------- ಜಿಲ್ಲೆ

ಮಾನ್ಯರೆ,

ವಿಷಯ:- LKG ಯಿಂದ 12ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ APAAR ID ಸೃಜಿಸುವ ಕುರಿತು.

ಉಲ್ಲೇಖ:- ಕಾರ್ಯದರ್ಶಿಗಳು, ಶಿಕ್ಷಣ ಮಂತ್ರಾಲಯ, ನವದೆಹಲಿ ರವರ ಪತ್ರಸಂಖ್ಯೆ : 1-27/2023-DIEGD- Part (2) ದಿನಾಂಕ: 10-04-2026

******

ಮೇಲಿನ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಶಿಕ್ಷಣ ಮಂತ್ರಾಲಯದ ನಿರ್ದೇಶನದಂತೆ ಎಲ್ಲಾ ಶಾಲೆಗಳಲ್ಲಿನ ವಿದ್ಯಾರ್ಥಿಗಳಿಗೆ (LKG ಯಿಂದ 12ನೇ ತರಗತಿವರೆಗೆ) APAAR ID ಸೃಜಿಸಲು ಸೂಚಿಸಲಾಗಿತ್ತು. ಈವರೆಗೆ ಒಟ್ಟು **1,16,32,828** ವಿದ್ಯಾರ್ಥಿಗಳ ಪೈಕಿ ಪ್ರಸ್ತುತ **75,16,563** (ಶೇ.64) ವಿದ್ಯಾರ್ಥಿಗಳಿಗೆ ಮಾತ್ರ APAAR ID ಸೃಜನೆಯಾಗಿರುತ್ತದೆ. ಈ ಪತ್ರದೊಂದಿಗೆ ಲಗತ್ತಿಸಿರುವ ಅನುಬಂಧ-01 ರಲ್ಲಿ ಜಿಲ್ಲಾವಾರು ಸಾಧಿಸಿರುವ ಪ್ರಗತಿ ಹಾಗೂ ಸೃಜಿಸಬೇಕಾಗಿರುವ APAAR ID ಗಳ ಮಾಹಿತಿಯು ಲಭ್ಯವಿದೆ ಈ ಮಾಹಿತಿಯನ್ನು ಪರಿಶೀಲಿಸಿ APAAR ID ಸೃಜಿಸಲು ಕ್ರಮಕೈಗೊಳ್ಳಲು ಸೂಚಿಸಿದೆ. ಇದಕ್ಕಾಗಿ ಶಿಕ್ಷಣ ಮಂತ್ರಾಲಯ ನಿರ್ದೇಶಿಸಿರುವಂತೆ (ಪ್ರತಿ ಲಗತ್ತಿಸಿದೆ) ವಾರದಲ್ಲಿ ಒಂದು ದಿನವನ್ನು APAAR Saturation ದಿನ ಎಂದು ಪರಗಣಿಸಿ ಕ್ರಮ ಕೈಗೊಳ್ಳಬಹುದಾಗಿದೆ. ಪತ್ರದಲ್ಲಿ ನೀಡಿರುವ ನಿರ್ದೇಶನಗಳನ್ನು ಪಾಲಿಸುವಂತೆ ಸೂಚಿಸಿದೆ.

ಈ ಕಾರ್ಯಕ್ಕಾಗಿ ಜಿಲ್ಲಾ ಯೋಜನಾ ಕಛೇರಿಯಲ್ಲಿ ಒಬ್ಬ ಅಧಿಕಾರಿಯನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಿ ಪ್ರತಿವಾರ ಸಾಧಿಸಿರುವ ಪ್ರಗತಿ ವಿವರವನ್ನು ಈ ಕಛೇರಿಯ ಯೋಜನಾ ವಿಭಾಗದ ಈ ಮೇಲ್ ವಿಳಾಸ sskplanning2024@gmail.com ಗೆ ತಪ್ಪದೆ ವರದಿಯನ್ನು ಕಳುಹಿಸುವಂತೆ ಸೂಚಿಸಿದೆ. ಈ ವರದಿಯನ್ನಾಧರಿಸಿ ರಾಜ್ಯ ಯೋಜನಾ ನಿರ್ದೇಶಕರ ಕಛೇರಿಯಿಂದ ವಾರಕ್ಕೊಮ್ಮೆ ಪ್ರಗತಿ ಪರಿಶೀಲನಾ ಸಭೆಯನ್ನು ಹಮ್ಮಿಕೊಳ್ಳಲಾಗುವುದು. APAAR ID ಸೃಜನೆ ಕಾರ್ಯವನ್ನು ದಿನಾಂಕ: 25-04-2026 ರಿಂದ 30-06-2026 ರೊಳಗೆ ಪೂರ್ಣಗೊಳಿಸಬೇಕಾಗಿರುವುದರಿಂದ ತಮ್ಮ ನೇತೃತ್ವದಲ್ಲಿ ಎಲ್ಲಾ ಶಾಲೆಗಳ ಮುಖ್ಯ ಶಿಕ್ಷಕರುಗಳಿಗೆ ಈ ಬಗ್ಗೆ ಅರಿವನ್ನು ಮೂಡಿಸಿ ಕಾರ್ಯೋನ್ಮುಖರಾಗಲು ನಿರ್ದೇಶನ ನೀಡಲು ಸೂಚಿಸಿದೆ.

ನಿರ್ದೇಶಕರು (ಕಾರ್ಯಕ್ರಮ)
ಸಮಗ್ರ ಶಿಕ್ಷಣ ಕರ್ನಾಟಕ
ಬೆಂಗಳೂರು.